**147/2025**

**PART – II** **(PAPER – II)**

| | | |
|---|---|---|
| Total Number of Questions : 8 | Maximum Marks : 50 | Time : 1 Hour |

## INSTRUCTIONS (നിർദ്ദേശങ്ങൾ)

1. Question cum Answer Booklets are processed by electronic means. The following instructions are to be strictly followed to avoid invalidation of answer scripts.
(ചോദ്യവും ഉത്തരവും അടങ്ങുന്ന ഈ ബുക്ക് ലെറ്റുകൾ ഇലക്ട്രോണിക് സാങ്കേതിക വിദ്യയുടെ സഹായത്തോടുകൂടെ മൂല്യനിർണ്ണയം നടത്തുന്നതിനാൽ ഇവ അസാധുവാകാതിരിക്കുവാൻ താഴെപ്പറയുന്ന നിർദ്ദേശങ്ങൾ പൂർണ്ണമായും പാലിക്കുക.)

2. The first page of this question cum Answer Booklet is an OMR data Sheet (Part I). All entries in the OMR sheet are to be made with blue or black ball point pen only.
(ഈ പുസ്തകത്തിന്റെ ഒന്നാമത്തെ പേജ് ഒരു ഒ.എം.ആർ. ഡാറ്റാ ഷീറ്റാണ് (പാർട്ട് I). ഇത് നീലയോ, കറുപ്പോ നിറത്തിലെ ബോൾ പോയിന്റ് പേന ഉപയോഗിച്ച് മാത്രമേ പൂരിപ്പിക്കാവൂ.)

3. Make sure that register number is bubbled correctly and completely; no correction is permitted.
(രജിസ്റ്റർ നമ്പർ രേഖപ്പെടുത്തുന്നതിനുള്ള കുമിളകൾ കൃത്യമായും പൂർണ്ണമായും കറുപ്പിച്ചിട്ടുണ്ടെന്ന് ഉറപ്പു വരുത്തുക. തിരുത്തലുകൾ അനുവദനീയമല്ല.)

4. Do not tamper the bar code printed on the OMR sheet and subsequent pages. Tampering of bar code will result in the invalidation of this booklet.
(ഈ പുസ്തകത്തിൽ എവിടെയും പ്രിന്റ് ചെയ്തിരിക്കുന്ന ബാർ കോഡിൽ ഒരു കാരണവശാലും തിരുത്തലുകളോ, മാർക്കുകളോ പാടില്ല. ഇതിനു വിരുദ്ധമായി ചെയ്യുന്ന പക്ഷം ഈ പുസ്തകം അസാധുവാകുന്നതാണ്.)

5. Answers should be written with blue or black ball point pen only.
(ഉത്തരങ്ങൾ നീലയോ, കറുപ്പോ നിറത്തിലെ ബോൾ പോയിന്റ് പേന ഉപയോഗിച്ച് മാത്രമേ എഴുതാവൂ.)

6. Do not write anything outside the margin of space provided for writing the answer and write only one line of answer between two lines.
(പുസ്തകത്തിൽ ഉത്തരം എഴുതുവാൻ നൽകിയിരിക്കുന്ന സ്ഥലത്തിനു വെളിയിൽ യാതൊന്നും തന്നെ എഴുതുവാൻ പാടില്ല. രണ്ടു വരകൾക്കിടയിൽ ഒരു വരി ഉത്തരം മാത്രമേ എഴുതുവാൻ പാടുള്ളൂ.)

7. Rough work should be done only in the specific page provided with.
(റഫ് വർക്കുകൾ ഇതിനായി നൽകിയിരിക്കുന്ന പേജിൽ മാത്രമേ ചെയ്യുവാൻ പാടുള്ളൂ.)

ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

ಹರಿಪುರಿ ಎಂಬ ಪೊಳಲೊಳ್ ಗಂಭೀರೆ ಎಂಬ ಬಿರ್ದ್ದಿಯಾಕೆಯ ಮಗಳ್ ಹರಿಣಿಯೆಂಬೊಳ್ ಆಕೆಯಂ ಜಯಂತಮೆಂಬ ಪೊಳಲೊಳ್ ವಸುದತ್ತನೆಂಬ ಪರದಂಗೆ ಕೊಟ್ಟೊಡೆ ಆಕೆಗೆ ಗರ್ಭಮಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವು ತೆರದ ಲಡ್ಡುಗೆಗಳಂ ಮಂಡಗೆಗಳಂ ಮೊದಲಾಗೊಡೆಯ ಪಲವು ಭಕ್ಷ್ಯ ರೂಪಂಗಳಂ ಕೊಂಡು ಗಂಭೀರೆಯೆಂಬ ಬಿರ್ದ್ದಿ ಹರಿಪುರದಿಂ ಪೊರಮಟ್ಟು ಮಗಳಿದ್ದೂರ್ಗೆ ಪೋಪನ್ನೆಗಮ್ ಆಯೆಡೆಯೊಳ್ ಬರ್ಪ ಕಳ್ಳರಂ ಕಂಡು ಅವರೊಳಗೆ ಒರ್ವನಂ ಪಿಡಿದು ಎನ್ನ ಮಗನ್ ನಿನ್ನನ್ನನೇ ಪನ್ನೆರಡು ಬರಿಸಂ ಪೋದನ್ ಎತ್ತ ಪೋದನೆಂದರಿಯೆಮ್ ಆತನಂ ಕಾಣದಿರುಳಂ ಪಗಲುಂ ನೆನೆನೆನೆದು ಅಳ್ತು ಕಣ್ಗಳ್ ಬಾತಿರ್ಪುದು ಇಂದೆನಗಾತನಂ ಬಂದಂತಿರೆ ನಿನ್ನಂ ಕಂಡು ಸಂತಸಮಾಯ್ತು ಮಗನೆ ನೀಮೆಲ್ಲಂ ಬನ್ನಿಂ ಪೋಪಂ ಸಾರೆಯೂರು ಮಿಂದುಂಡುಟ್ಟು ವಿಶ್ರಮಿಸಿ ನಾಳೆ ಪೋಪಿರೆಂದು ಒಗಡೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗ್ಗೆಲ್ಲಂ ನೀರನಿಡಿಸಿ ತಲೆಯಂ ಪೂಸಿಸಿಯೊಲ್ಲಣಿಗೆಯನುಡಿಸಿ ತಲೆಯೊಳ್ ತಳಿಯಂ ಪೊಯ್ದಾಗಳ್ ಬಿರ್ದ್ದಿ ಮನೆಯ ಮೇಗೇರಿ ಕಳ್ಳರೆಂದು ಪುಯ್ಯಲಿಟ್ಟಾಗಳ್ ಅನಿಬರುಂ ತ್ರಸ್ಥಾಭಿಭೂತರಾಗಿ ಪಟ್ಟನೆ ಪರಿಯೆಯೊಡಿ ಕೆಟ್ಟೊಳ್ಳಿತ್ತೆಮ್ಮಂ ಛಿದ್ರಿಸಿದಳೆಂದು ಪಗೆ ಸಾರಿರ್ದರ್ ಇತ್ತ ಬಿರ್ದ್ದಿಯುಂ ನೆಟ್ಟನೆ ಒಂದಿರುಳ್ ಕಳ್ಳರ್ ಬರ್ಪರೆಂದರಿದು ಕೂರಿತಪ್ಪ ಬಾಳಂ ಪಿಡಿದಿರ್ದ್ದಳ್ ಅನ್ನೆಗಮ್ ಇರುಳ್ ಕಳ್ಳರ್ ಬಂದಾಕೆಯ ಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳ್ ಬಾಳನಡ್ಡಮಿಟ್ಟು ಪಿಡಿದಿರ್ದ್ದು ಪುಗುವ ಕಳ್ಳನ ಮೂಗರಿದೊಡೆ ಅವಂ ಪೊರಮಟ್ಟು ಎನಗೆ ಪುಗಲ್ ಪಾಂಗಿಲ್ಲ ನೀಂ ಪುಗೆಂದು ಪೆರನೊರ್ವನಂ ಪುಗಿಸಿದೊಡೆ ಆತನ ಮೂಗುವಂ ಕೊರೆದೊಡೆ ಆತನುಂ ಪೆರನೊರ್ವನಂ ಪುಗಿಸಿಯಂತೆ ಅನಿಬರುಂ ಸೂಳ್ ಸೂಳೊಳೆ ಪೊಕ್ಕು ಅನಿಬರ ಮೂಗುಮಂ ಕೊರೆದಿಕ್ಕಿದೊಡೆ ಅನಿಬರುಂ ಮೂಗರಿಯೆಪಟ್ಟು ಪೊರಮಟ್ಟು ಪೋಗಿ ಓರ್ವ ಇಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿದರ್.

1. ಗಂಭೀರೆಯು ಮಗಳಿದ್ದೂರಿಗೆ ಹೋಗುತ್ತಿರುವುದರಲ್ಲಿನ ಸಾಂಪ್ರದಾಯಿಕ ವೈಶಿಷ್ಟ್ಯಗಳನ್ನು ಪರಿಚಯಿಸಿ. (2 Marks)

2. ದಾರಿಯಲ್ಲಿ ಕಳ್ಳರು ಎದುರಾದಾಗ ಗಂಭೀರೆಯ ಸಮಯಪ್ರಜ್ಞೆ ಹೇಗೆ ಕೆಲಸ ಮಾಡಿದೆ? (2 Marks)

3. ಕಳ್ಳರನ್ನು ತನ್ನೊಡನೆ ಕರೆದುಕೊಂಡು ಹೋದ ಗಂಭೀರೆಯು ಉಪಚರಿಸಿದ್ದು ಹೇಗೆ? (2 Marks)

4. ಮನೆಗೆ ಕನ್ನ ಹಾಕಲು ಬಂದ ಕಳ್ಳರಿಗೆ ಮುದುಕಿ ಕೊಟ್ಟ ಶಿಕ್ಷೆ ಎಂಥದ್ದು? (2 Marks)

5. ಮೊದಲು ಮೂಗು ಕತ್ತರಿಸಿಕೊಂಡ ಕಳ್ಳರ ಮನಃಸ್ಥಿತಿ ಮತ್ತು ಸ್ವಭಾವ ಹೇಗೆ ವ್ಯಕ್ತವಾಗಿದೆ? (2 Marks)

6. ಪ್ರಸ್ತುತ ಭಾರತದಲ್ಲಿನ ಸಾಮಾಜಿಕ ಬಿಕ್ಕಟ್ಟುಗಳು – ಕುರಿತು ಪ್ರಬಂಧ ಬರೆಯಿರಿ. (10 Marks)

(100 ಪದಗಳಿಗೆ ಕಡಿಮೆಯಿಲ್ಲದಂತೆ 200 ಪದಗಳಿಗೆ ಮೀರದಂತೆ)

7. ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು 50 ಪದಗಳಿಗೆ ಮೀರದಂತೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಕೊಡಿ. (10 Marks)

ಒಂದು ಕಾಡು. ಆ ಕಾಡಿನಲ್ಲಿ ಒಂದು ಸಿಂಹ, ಒಂದು ತೋಳ. ಒಂದು ನರಿ ವಾಸಿಸುತ್ತಿದ್ದವು. ಈ ಮೂರೂ ಪ್ರಾಣಿಗಳು ಒಳ್ಳೆಯ ಸ್ನೇಹಿತರು. ಈ ಮೂರೂ ಪ್ರಾಣಿಗಳು ಸೇರಿ ಒಂದು ದಿನ ಭರ್ಜರಿ ಬೇಟೆ ಆಡಿದವು. ಹಾಗೆ ಬೇಟೆ ಆಡಿದ ವಿವಿಧ ಜಾತಿಯ ಪ್ರಾಣಿಗಳನ್ನೆಲ್ಲಾ ಒಂದು ಕಡೆ ಗುಡ್ಡದಂತೆ ರಾಶಿ ಹಾಕಿದವು. ಬೆಟ್ಟದಂತೆ ಬಿದ್ದಿದ್ದ ರಾಶಿಯನ್ನು ನೋಡಿ ಆಸೆಯಿಂದ ಸಿಂಹವು ತೋಳಕ್ಕೆ ಹೇಳಿತು. 'ತೋಳಣ್ಣ, ಈ ಪ್ರಾಣಿಗಳನ್ನೆಲ್ಲಾ ಸಮವಾಗಿ ಮೂರು ಪಾಲು ಹಾಕು' ಎಂದಿತು. ಆಗ ತೋಳವು ಮೂವರಿಗೂ ಸಮಪಾಲು ಮಾಡಿ ಸರಿತಾನೇ'? ಎಂದು ಸಿಂಹದ ಕಡೆ ನೋಡಿತು. ಆ ರಾಶಿಗಳ ಕಡೆ ಸಿಂಹ ನೋಡಿ ಏನನ್ನೂ ಮಾತಾಡಲಿಲ್ಲ. ಒಮ್ಮೆಲೆ ತೋಳದ ಕುತ್ತಿಗೆಯನ್ನು ಕಚ್ಚಿಹಿಡಿದು ರಕ್ತವನ್ನು ಹೀರಿ ಸಾಯಿಸಿತು.

ಸಿಂಹ ತೋಳವನ್ನು ಸಾಯಿಸಿದ್ದನ್ನು ಗಮನಿಸಿದ ನರಿ ತುಟಿಪಿಟಿಕ್ ಅನ್ನಲಿಲ್ಲ. ನರಿಯ ಕಡೆ ಸಿಂಹ ನೋಡಿತು. ನರಿ ಕಣ್‌ಕಣ್ ಬಿಡುತ್ತ ಕುಳಿತಿತ್ತು. ಸಿಂಹ ನರಿಗೆ ಹೇಳಿತು.

'ಓಯ್ ನರಿ, ಇವೆಲ್ಲವನ್ನೂ ನಮ್ಮಿಬ್ಬರಿಗೆ ಸರಿಸಮಾನವಾಗಿ ಪಾಲುಮಾಡು' ಎಂದಿತು. ನರಿ ಎಲ್ಲಾ ಪ್ರಾಣಿಗಳನ್ನು ಒಂದೇ ಕಡೆ ರಾಶಿ ಹಾಕಿತು. ಒಂದೇ ಒಂದು ಮೊಲದ ಮರಿಯನ್ನು ತೆಗೆದು ಇನ್ನೊಂದು ರಾಶಿಯಂತೆ ಇಟ್ಟಿತು. ನಂತರ 'ಸಿಂಹರಾಜ ಸಮವಾಗಿ ಎರಡು ರಾಶಿ ಮಾಡಿರುವೆನು. ಈ ರಾಶಿಗಳಲ್ಲಿ ಎಲ್ಲಾ ಪ್ರಾಣಿಗಳ ರಾಶಿಯನ್ನು ನೀನು ತೆಗೆದುಕೊ. ನನಗೆ ಈ ಮೊಲದ ಮರಿ ಸಾಕು' ಎಂದಿತು. 'ನರಿಯಣ್ಣ, ಪಾಲನ್ನು ಸರಿಸಮಾನವಾಗಿ ಮಾಡಿರುವೆಯಲ್ಲ. ಶಭಾಷ್ ನಿನ್ನ ಬುದ್ಧಿಶಕ್ತಿಗೆ ಮೆಚ್ಚಿದೆ. ಮೆಚ್ಚುಗೆ ಸೂಚಿಸಿ, ಹೀಗೆ ಮಾಡಬೇಕೂಂತ ನಿನಗೆ ಹೇಳಿಕೊಟ್ಟವರಾರು?' ಎಂದು ಕೇಳಿತು. 'ಈ ಮೊದಲು ಸತ್ತ ತೋಳ ಸ್ವಾಮಿ' ಎಂದಿತು ನರಿ. 'ಏನೂಂತ?' ವ್ಯಕ್ತಿಯನ್ನು ನೋಡಿ ನಡೆದುಕೊ. ನೋಡಿ ನಡೆದುಕೊಂಡರೆ ಕೇಡಿಲ್ಲ ಅಂತ ಎಂದಿತು.

8. ಈ ಕೆಳಗೆ ಕೊಟ್ಟಿರುವ ಕನ್ನಡ ಗದ್ಯಭಾಗವನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿ. (20 Marks)

ನ್ಯಾಯದ ವಿಚಾರ ಮಾತಾಡುವಾಗ 'ನ್ಯಾಯ ಎಲ್ಲರಿಗೂ ಒಂದೇ ಎಂದೇನೋ ಹೇಳುತ್ತೇವೆ. ಆದರೆ ಎಷ್ಟೋ ಸಲ ನ್ಯಾಯ ಅಧಿಕಾರಸ್ಥ ಮತ್ತು ಬಲಾಢ್ಯರ ಕಡೆಗೆ ಜೋತು ಬೀಳುತ್ತದೆ. ಅಂಥ ಸಂದರ್ಭದಲ್ಲಿ ಅನೇಕ ಅಶಕ್ತರಿಗೆ, ದೀನ ದುರ್ಬಲರಿಗೆ ಅನ್ಯಾಯ ಆಗುತ್ತದೆ. ಇಂಥ ಅನ್ಯಾಯವನ್ನು ಅವರು ಬಾಯಿ ಬಿಟ್ಟು ಹೇಳುವುದಕ್ಕೂ ಸಾಧ್ಯವಾಗದಂಥ ಸಂಕಟಕ್ಕೆ ಸಿಕ್ಕಿ ಬೀಳುತ್ತಾರೆ. ಮತ್ತೆ ಕೆಲವರು ಆ ಬಲಾಢ್ಯರ ವಿರುದ್ಧ ತಿರುಗಿ ಬಿದ್ದರೆ ತಮಗೆಲ್ಲಿ ಅಪಾಯ ಆಗುತ್ತದೋ ಎಂದು ತಿಳಿದು ಅನ್ಯಾಯವನ್ನು ಒಪ್ಪಿಕೊಂಡು ಅದಕ್ಕೆ ತಲೆಬಾಗಿ ತಣ್ಣಗಿದ್ದು ಬಿಡುತ್ತಾರೆ. ಹೀಗೆ ನಡೆದುಕೊಂಡರೆ ಅದರಿಂದಾಗುವ ಕೇಡಿನಿಂದ ಪಾರಾಗಬಹುದು. ಇಲ್ಲದಿದ್ದರೆ ಸಂಕಟಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ ಎಂಬ ಸಣ್ಣ ತಿಳುವಳಿಕೆ ಅವರದು'.

ಇಂಥ ವ್ಯಕ್ತಿಗಳ ಬದುಕಿನಲ್ಲಿ ಆಲೋಚನೆ ತುಂಬಾ ಮುಖ್ಯವಾಗುತ್ತದೆ. ಯಾವಾಗ, ಏನನ್ನೂ ಮಾತಾಡಬೇಕು? ಎಂತಹ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಅರಿವು ಅವನಲ್ಲಿರಬೇಕಾಗುತ್ತದೆ. ಸಮಯ ಸಂದರ್ಭವನ್ನು ಅರಿತುಕೊಳ್ಳದೆ ಪ್ರತಿಭಟಿಸಿ ಮಾತಾಡಿದರೆ ಅಪಾಯಗಳು ಎದುರಾಗಬಹುದು. ವಿರೋಧಿಸುವ ಮೊದಲು ಒಂದಲ್ಲ ಹತ್ತು ಸಲ ಆಲೋಚಿಸಿ, ನಂತರ ಮಾತಾಡಬೇಕು. ಒಮ್ಮೊಮ್ಮೆ ಮೌನವೂ ಆ ವ್ಯಕ್ತಿಯನ್ನು ಅಪಾಯದಿಂದ ಪಾರುಮಾಡಬಹುದು. ಹಾಗಾಗಿ ಪ್ರತಿ ವ್ಯಕ್ತಿಯ ಎದುರಿನಲ್ಲಿರುವ ಸಮಸ್ಯೆ ಎಷ್ಟೇ ದೊಡ್ಡದಾದರೂ, ಎಷ್ಟೇ ಅನ್ಯಾಯಯುತವಾಗಿದ್ದರೂ, ಅದು ಆ ವ್ಯಕ್ತಿಗೆ ಎಷ್ಟೇ ನೋವನ್ನು ತಂದುಕೊಟ್ಟಿದ್ದರೂ ತಾನು ಯಾರೊಡನೆ ವಾದಕ್ಕೆ ಇಳಿಯುತ್ತಿದ್ದೇನೆ. ಯಾರನ್ನು ಎದುರು ಹಾಕಿಕೊಳ್ಳುತ್ತಿದ್ದೇನೆ ಎಂಬ ಪ್ರಜ್ಞೆ ಮಾತ್ರ ಆತನ ಮನಸ್ಸಿನಲ್ಲಿ ಸದಾ ಜಾಗೃತವಾಗಿರಬೇಕು. ಬಡವನ ಕೋಪ ದವಡೆಗೆ ಮೂಲ ಎಂಬ ಗಾದೆಯಂತೆ ಕೋಪವೂ ಕೆಲವೊಮ್ಮೆ ಅವನ ಬದುಕಿಗೆ ಮುಳುವಾಗಬಹುದು.

ಕೋಪ ವಿವೇಕವನ್ನು ಕೊಂದು ಹಾಕುತ್ತದೆ. ಕೋಪದ ಕೈಗೆ ಮನಸ್ಸು ಕೊಡಬಾರದು. ಎಂಥ ದುಃಖ ಮತ್ತು ಸಂಕಷ್ಟದಲ್ಲೂ ತಾಳ್ಮೆ ಅಥವಾ ಸಹನೆ ತೀರ ಅಗತ್ಯವಾಗಿ ಬೇಕಾಗುತ್ತದೆ. ಈ ಸಹನೆಯೇ ಮನುಷ್ಯನನ್ನು ಅನೇಕ ಅವಘಡಗಳಿಂದ ಪಾರುಮಾಡಬಲ್ಲ ಏಕೈಕ ಮಂತ್ರ. ಹೀಗಾಗಿ ಪ್ರತಿ ವ್ಯಕ್ತಿಯೂ ತನ್ನ ಜೀವನದಲ್ಲಿ ನೆನಪಿಟ್ಟುಕೊಳ್ಳಬೇಕಿರುವ ಸಂಗತಿಯೆಂದರೆ ತಾಳ್ಮೆ ಕಾಯುತ್ತದೆ ಕೋಪ ಕೊಲ್ಲುತ್ತದೆ ಎಂಬುದು.